ಕರ್ನಾಟಕ ಸರ್ಕಾರ

ನಿರ್ದೇಶಕರ ಕಚೇರಿ, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು

# 1540 , ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಮೈಸೂರು-570023, ದೂರವಾಣಿ; 0821-2560275, ಇ-ಮೇಲ್-trimysore@gmail

ಸಂ:ಟಿಆರ್‌ಐ/ಮೈ/ಸಂವಿ/ಸಿಆರ್-63/2019-20 ದಿನಾಂಕ: 12/11/2019 2020

## - : ಅಧಿಕೃತ ಜ್ಞಾಪನ : -

ವಿಷಯ:- ಕರ್ನಾಟಕದಲ್ಲಿ ಸ್ಥಳಾಂತರಗೊಂಡಿರುವ ಪರಿಶಿಷ್ಟ ಪಂಗಡದ ವಿವಿಧ ಬುಡಕಟ್ಟು ಸಮುದಾಯಗಳ ಕುರಿತು ಕಾನೂನಾತ್ಮಕ ಸಂಶೋಧನಾ ಅಧ್ಯಯನ ಕೈಗೊಳ್ಳಲು ಅನುದಾನ ಬಿಡುಗಡೆ ಕುರಿತು.

ಉಲ್ಲೇಖ:-1. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಪತ್ರ ಸಂಖ್ಯೆ ಡಿವಿ 6/304/ಇತರೆ/2019-20, ದಿನಾಂಕ: 05/02/2020.

2. ಈ ಕಚೇರಿಯ ದಿನಾಂಕ: 20/10/2020ರ ಸಮಸಂಖ್ಯೆ ಪತ್ರ.
3. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಪತ್ರ ಸಂಖ್ಯೆ ಡಿವಿ 6/304/ಇತರೆ/2019-20, ದಿನಾಂಕ: 05/11/2020.

*********

ಉಲ್ಲೇಖ (1)ರ ಪತ್ರದೊಂದಿಗೆ ಪ್ರೊ. ಮಾರುತಿ ಟಿ.ಅರ್., ಪ್ರಾಧ್ಯಾಪಕರು ಮತ್ತು ಮುಖ್ಯ ಸಂಶೋಧಕರು, ಕಾನೂನು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಅಂಗೀಕರಿಸಿ, ರೂ. 10.00 ಲಕ್ಷಗಳ ಮಿತಿಯಲ್ಲಿ **ಕರ್ನಾಟಕದಲ್ಲಿ ಸ್ಥಳಾಂತರಗೊಂಡಿರುವ ಪರಿಶಿಷ್ಟ ಪಂಗಡದ ವಿವಿಧ ಬುಡಕಟ್ಟು ಸಮುದಾಯಗಳ ಕುರಿತು ಕಾನೂನಾತ್ಮಕ ಸಂಶೋಧನಾ ಅಧ್ಯಯನ** ಕಾರ್ಯವನ್ನು ತಮ್ಮ ವಿಶ್ವವಿದ್ಯಾನಿಲಯದ ಸಹಯೋಗದಲ್ಲಿ ಕೈಗೊಳ್ಳಲು ಉಲ್ಲೇಖ (2)ರ ಪತ್ರದಲ್ಲಿ ಅನುಮೋದನೆ ನೀಡಿ, ಈ ಅಧ್ಯಯನ ಕಾರ್ಯವನ್ನು ಅನುದಾನ ಬಿಡುಗಡೆ ಮಾಡಿದ 06 ತಿಂಗಳ ಒಳಗೆ ಪೂರ್ಣಗೊಳಿಸಲು ಮತ್ತು ಅದಕ್ಕಾಗಿ ನಿಗಧಿಪಡಿಸಿರುವ ಅನುದಾನವನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಬಿಡುಗಡೆ ಮಾಡುವ ಸಲುವಾಗಿ ರೂ. 100.00 ಗಳ ಛಾಪಾ ಕಾಗದದಲ್ಲಿ ಈ ಕಚೇರಿಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರನ್ನು ಕೋರಲಾಗಿತ್ತು.

ಉಲ್ಲೇಖ (3)ರ ಪತ್ರದೊಂದಿಗೆ ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು, ರೂ. 100.00 ಗಳ ಛಾಪಾ ಕಾಗದದಲ್ಲಿ ಒಡಂಬಡಿಕೆಯನ್ನು ಈ ಕಚೇರಿಗೆ ಸಲ್ಲಿಸಿರುತ್ತಾರೆ. ಒಡಂಬಡಿಕೆಯಲ್ಲಿನ ಕ್ರ.ಸಂ. 03 ರಂತೆ, ಅಧ್ಯಯನ ಕಾರ್ಯಕ್ಕೆ ಮಂಜೂರು ಮಾಡಿರುವ ರೂ. 10.00 ಲಕ್ಷಗಳ ಅನುದಾನವನ್ನು ಕೆಳಕಂಡಂತೆ 03 ಕಂತುಗಳಲ್ಲಿ ಬಿಡುಗಡೆ ಮಾಡಲು ಒಡಂಬಡಿಕೆ ಮಾಡಿಕೊಳ್ಳಲಾಗಿದೆ.

| | | | |
|---|---|---|---|
| 1. ಮೊದಲನೇ ಕಂತು | ರೂ. | 5.00 ಲಕ್ಷಗಳು | - ಒಡಂಬಡಿಕೆ ಪತ್ರ ಸಲ್ಲಿಸಿದ ಕೂಡಲೇ. |
| 2. ಎರಡನೇ ಕಂತು | ರೂ. | 2.50 ಲಕ್ಷಗಳು | - ಕ್ಷೇತ್ರ ಅಧ್ಯಯನ ಕಾರ್ಯ ಮುಗಿದ ಕೂಡಲೇ ಸಲ್ಲಿಸುವ ಪ್ರಗತಿ ವರದಿಗನುಗುಣವಾಗಿ |
| 3. ಮೂರನೇ ಕಂತು | ರೂ. | 2.50 ಲಕ್ಷಗಳು | - ಅಧ್ಯಯನ ಕಾರ್ಯದ ಅಂತಿಮ ವರದಿ ಸಲ್ಲಿಸಿದ ನಂತರ |

ಮೇಲ್ಕಂಡ ವಿವರಗಳಂತೆ ಒಡಂಬಡಿಕೆ ಪತ್ರಕ್ಕನುಗುಣವಾಗಿ ಪ್ರಸ್ತುತ ಒಡಂಬಡಿಕೆ ಪತ್ರ ಸಲ್ಲಿಸಿರುವುದರಿಂದ ಮೊದಲನೇ ಕಂತಿನ ಅನುದಾನ ರೂ. 5.00 ಲಕ್ಷಗಳನ್ನು ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಿ ಆದೇಶಿಸಿದೆ. ಈ ಮೊತ್ತವನ್ನು ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ರವರಿಗೆ ಕೆಳಕಂಡ ಬ್ಯಾಂಕ್ ಖಾತೆಗೆ ಆರ್.ಟಿ.ಜಿ.ಎಸ್. ಮೂಲಕ ಪಾವತಿಸಿ ಈ ವೆಚ್ಚವನ್ನು ಬ್ಯಾಂಕ್ ಆಫ್ ಬರೋಡ, ಕುವೆಂಪುನಗರ ಶಾಖೆ, ಮೈಸೂರು ಇಲ್ಲಿನ ಉಳಿತಾಯ ಖಾತೆಯಲ್ಲಿರುವ ಸಂಬಂಧಿಸಿದ ಬಾಬ್ತಿನಿಂದ ಭರಿಸಲು ಅನುಮೋದಿಸಿದೆ.

| Sl. No. | Name | Bank Name & Branch | Account No. | IFSC Code |
|---|---|---|---|---|
| 1 | Finance Officer<br>University of Mysore | SBI,<br>University Campus Br. | SB A/c No.<br>54007591437 | SBIN0040059 |

13-XI-2020

ನಿರ್ದೇಶಕರು,
ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ,
ಮೈಸೂರು.

**ಪ್ರತಿಗಳು:**

1. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ರವರಿಗೆ ಮಾಹಿತಿಗಾಗಿ.
2. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ರವರಿಗೆ ಮಾಹಿತಿಗಾಗಿ.
3. ಪ್ರೊ. ಮಾರುತಿ ಟಿ.ಆರ್., ಪ್ರಾಧ್ಯಾಪಕರು ಮತ್ತು ಮುಖ್ಯ ಸಂಶೋಧಕರು, ಕಾನೂನು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಮುಂದಿನ ಕ್ರಮಕ್ಕಾಗಿ,
4. ಕಚೇರಿ ಅಧೀಕ್ಷಕರು, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು.
5. ಕಚೇರಿ ಪ್ರತಿ.

ಕರ್ನಾಟಕ ಸರ್ಕಾರ

**ನಿರ್ದೇಶಕರ ಕಚೇರಿ, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು**

# 1540 , ಅನಿಕೇತನ ರಸ್ತೆ, ಕುವೆಂಪುನಗರ, ಮೈಸೂರು–570023, ದೂರವಾಣಿ; 0821–2560275, ಇ–ಮೇಲ್–trimysore@gmail.com

ಸಂ;ಟಿಆರ್ಐ/ಮೈ/ಸಂವಿ/ಸಿಆರ್–63/2019–20 ದಿನಾಂಕ: 21/04/2021

– : <u>ಅಧಿಕೃತ ಜ್ಞಾಪನ</u> : –

ವಿಷಯ:– ಕರ್ನಾಟಕದಲ್ಲಿ ಸ್ಥಳಾಂತರಗೊಂಡಿರುವ ಪರಿಶಿಷ್ಟ ಪಂಗಡದ ವಿವಿಧ ಬುಡಕಟ್ಟು ಸಮುದಾಯಗಳ ಕುರಿತು ಕಾನೂನಾತ್ಮಕ ಸಂಶೋಧನಾ ಅಧ್ಯಯನ ಕೈಗೊಳ್ಳಲು 2ನೇ ಕಂತಿನ ಅನುದಾನ ಬಿಡುಗಡೆ ಕುರಿತು.

ಉಲ್ಲೇಖ:–1. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಪತ್ರ ಸಂಖ್ಯೆ ಡಿವಿ 6/304/ಇತರೆ/2019–20, ದಿನಾಂಕ: 05/02/2020.
2. ಈ ಕಚೇರಿಯ ದಿನಾಂಕ: 12/11/2019ರ ಸಮಸಂಖ್ಯೆ ಅಧಿಕೃತ ಜ್ಞಾಪನಾ ಪತ್ರ.
3. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಪತ್ರ ಸಂಖ್ಯೆ ಡಿವಿ 6/94/ಕೆಎಸ್‌ಟಿಆರ್ಐ/ಮೈ–1/2020–21, ದಿನಾಂಕ: 18/03/2021.
4. ಅಧ್ಯಯನ ಕಾರ್ಯದ ಪ್ರಧಾನ ಸಂಶೋಧಕರ ಮನವಿ ದಿ: 20/04/2021.

*********

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ವತಿಯಿಂದ **ಕರ್ನಾಟಕದಲ್ಲಿ ಸ್ಥಳಾಂತರಗೊಂಡಿರುವ ಪರಿಶಿಷ್ಟ ಪಂಗಡದ ವಿವಿಧ ಬುಡಕಟ್ಟು ಸಮುದಾಯಗಳ ಕುರಿತು ಕಾನೂನಾತ್ಮಕ ಸಂಶೋಧನಾ ಅಧ್ಯಯನ** ಕಾರ್ಯವನ್ನು ಮೈಸೂರು ವಿಶ್ವವಿದ್ಯಾನಿಲಯದ ಸಹಯೋಗದಲ್ಲಿ ಕೈಗೊಳ್ಳಲಾಗಿದ್ದು, ಈ ಅಧ್ಯಯನ ಕಾರ್ಯಕ್ಕಾಗಿ ಉಲ್ಲೇಖ (2)ರ ಈ ಕಚೇರಿಯ ಅಧಿಕೃತ ಜ್ಞಾಪನದನ್ವಯ ಮೊದಲನೇ ಕಂತಾಗಿ ರೂ. 5.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿ, ಅಧ್ಯಯನ ಕಾರ್ಯವನ್ನು 06 ತಿಂಗಳ ಒಳಗೆ ಪೂರ್ಣಗೊಳಿಸಿ ವರದಿ ನೀಡಲು ತಿಳಿಸಲಾಗಿತ್ತು.

ಉಲ್ಲೇಖ (3)ರ ಪತ್ರದೊಂದಿಗೆ ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು, ಅಧ್ಯಯನ ಕಾರ್ಯದ ಪ್ರಧಾನ ಸಂಶೋಧಕರಾದ ಪ್ರೊ. ಟಿ.ಆರ್. ಮಾರುತಿ, ಪ್ರಾಧ್ಯಾಪಕರು ಮತ್ತು ಮುಖ್ಯ ಸಂಶೋಧಕರು, ಕಾನೂನು ವಿಭಾಗ, ಮೈಸೂರು ಇವರ ಮನವಿ ಮತ್ತು ಅಧ್ಯಯನ ಕಾರ್ಯದ ಪ್ರಗತಿ ವರದಿಯನ್ನು ಸಲ್ಲಿಸಿ, ಅಧ್ಯಯನ ಕಾರ್ಯವನ್ನು ಪೂರ್ಣಗೊಳಿಸಲು ಇನ್ನೂ 06 ತಿಂಗಳ ಕಾಲ ಅವಕಾಶ ನೀಡಲು ಮತ್ತು 2ನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡಲು ಕೋರಿದ್ದರು. ಈ ಸಂಬಂಧ ಪ್ರಧಾನ ಸಂಶೋಧಕರಾದ ಪ್ರೊ. ಟಿ.ಆರ್. ಮಾರುತಿ ಇವರೊಂದಿಗೆ ಚರ್ಚಿಸಿದ್ದು, ಅವರು ಉಲ್ಲೇಖ (4)ರಲ್ಲಿ ಮನವಿ ಸಲ್ಲಿಸಿ, ಅಧ್ಯಯನ ಕಾರ್ಯ ಪ್ರಗತಿಯಲ್ಲಿದ್ದು, ಮಧ್ಯಂತರ ವರದಿ ಸಲ್ಲಿಸುವುದಾಗಿ ಹಾಗೂ ಅಧ್ಯಯನ ಕಾರ್ಯ ಪೂರ್ಣಗೊಳಿಸಿ, ಅಂತಿಮ ವರದಿ ಸಲ್ಲಿಸಲು 06 ತಿಂಗಳ ಕಾಲಾವಕಾಶ ನೀಡಲು ಮತ್ತು 2ನೇ ಕಂತಿನ ಅನುದಾನ ಬಿಡುಗಡೆ ಮಾಡಲು ಕೋರಿರುತ್ತಾರೆ.

ಪ್ರಧಾನ ಸಂಶೋಧಕರಾದ ಪ್ರೊ. ಟಿ.ಆರ್. ಮಾರುತಿ ರವರು ಸಲ್ಲಿಸಿರುವ ಮನವಿ ಮತ್ತು ಉಲ್ಲಖ (3)ರಲ್ಲಿ ಕುಲಸಚಿವರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಇವರ ಪತ್ರವನ್ನು ಪರಿಗಣಿಸಿ, ಅಧ್ಯಯನ ಕಾರ್ಯಕ್ಕೆ ನಿಗಧಿಪಡಿಸಿರುವ ರೂ. 10.00 ಲಕ್ಷಗಳ ಅನುದಾನದಲ್ಲಿ ಈಗಾಗಲೇ ಮೊದಲನೇ ಕಂತಾಗಿ ರೂ. 5.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಪ್ರಸ್ತುತ 2ನೇ ಕಂತಿನ ಅನುದಾನ ರೂ. ರೂ. 2.50 ಲಕ್ಷಗಳನ್ನು ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಿ ಆದೇಶಿಸಿದೆ.

–2–

ಈ ಮೊತ್ತವನ್ನು ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ರವರಿಗೆ ಕೆಳಕಂಡ ಬ್ಯಾಂಕ್ ಖಾತೆಗೆ ಆರ್.ಟಿ.ಜಿ.ಎಸ್. ಮೂಲಕ ಪಾವತಿಸಿ ಈ ವೆಚ್ಚವನ್ನು ಬ್ಯಾಂಕ್ ಆಫ್ ಬರೋಡ, ಕುವೆಂಪುನಗರ ಶಾಖೆ, ಮೈಸೂರು ಇಲ್ಲಿನ ಉಳಿತಾಯ ಖಾತೆಯಲ್ಲಿರುವ ಸಂಬಂಧಿಸಿದ ಬಾಬ್ತಿನಿಂದ ಭರಿಸಲು ಅನುಮೋದಿಸಿದೆ.

| Sl. No. | Name | Bank Name & Branch | Account No. | IFSC Code |
|---|---|---|---|---|
| 1 | Finance Officer<br>University of Mysore | SBI,<br>University Campus Br. | SB A/c No.<br>54007591437 | SBIN0040059 |

ಉಲ್ಲೇಖ (3) ಮತ್ತು (4)ರ ಪತ್ರಗಳಲ್ಲಿ ಕೋರಿರುವಂತೆ ಅಧ್ಯಯನ ಕಾರ್ಯವನ್ನು ಪೂರ್ಣಗೊಳಿಸಿ, ಅಂತಿಮ ವರದಿಯನ್ನು ಸಲ್ಲಿಸಲು ಮತ್ತೆ 06 ತಿಂಗಳ ಕಾಲಾವಕಾಶವನ್ನು ನೀಡಲಾಗಿದೆ. ನಿಗಧಿತ ಅವಧಿಯೊಳಗೆ ಅಂತಿಮ ವರದಿಯನ್ನು ಸಲ್ಲಿಸಲು ಪ್ರಧಾನ ಸಂಶೋಧಕರಾದ ಪ್ರೊ. ಟಿ.ಆರ್. ಮಾರುತಿ ಮತ್ತು ಕುಲಸಚಿವರು ಮೈಸೂರು ವಿಶ್ವವಿದ್ಯಾಲಯ, ಮೈಸೂರು ಇವರನ್ನು ಕೋರಲಾಗಿದೆ.

21.IV.2021

ನಿರ್ದೇಶಕರು,
ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ,
ಮೈಸೂರು.

**<u>ಪ್ರತಿಗಳು:</u>**

1. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ರವರಿಗೆ ಮಾಹಿತಿಗಾಗಿ.
2. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ರವರಿಗೆ ಮಾಹಿತಿಗಾಗಿ.
3. ಪ್ರೊ. ಮಾರುತಿ ಟಿ.ಅರ್., ಪ್ರಾಧ್ಯಾಪಕರು ಮತ್ತು ಮುಖ್ಯ ಸಂಶೋಧಕರು, ಕಾನೂನು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಮುಂದಿನ ಕ್ರಮಕ್ಕಾಗಿ,
4. ಕಚೇರಿ ಅಧೀಕ್ಷಕರು, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು.
5. ಕಚೇರಿ ಪ್ರತಿ.